# ‘ವಿಜ್ಞಾನ ಸಂಸ್ಕೃತಿ’ ನಮ್ಮಲ್ಲಿದೆಯೆ?



**ವಿಜ್ಞಾನ ಒಂದು ಸಂಸ್ಕೃತಿಯಾಗಿ ಬೆಳೆದಿದೆಯೇ ಎನ್ನುವ ಪ್ರಶ್ನೆ ಮುಂದಿಟ್ಟಲ್ಲಿ, ‘ಹಾಗೆಂದರೇನು?’ ಎನ್ನುವ ಉತ್ತರ ಎದುರಾಗುವುದೇ ಹೆಚ್ಚು. ದೈನಂದಿನ ಜೀವನದಲ್ಲಿ ವಿಜ್ಞಾನ–ತಂತ್ರಜ್ಞಾನ ಹಾಸುಹೊಕ್ಕಾಗಿದ್ದರೂ ಅದರ ಮಹತ್ವದ ಬಗ್ಗೆ, ವೈಜ್ಞಾನಿಕ ಮನೋಭಾವದ ಬಗ್ಗೆ ಸಾರ್ವತ್ರಿಕ ತಿಳಿವಳಿಕೆ ಕಡಿಮೆಯೇ. ವಿಜ್ಞಾನ ಮತ್ತು ವಿಜ್ಞಾನಿ ದಂತಗೋಪುರದಲ್ಲಿರುವುದೇ ಹೆಚ್ಚು. ವಿಜ್ಞಾನವನ್ನು ಸರಳಗೊಳಿಸಬೇಕಾದ, ಜನಮುಖಿಗೊಳಿಸುವ ಹಾಗೂ ಸಂಸ್ಕೃತಿಯಾಗಿ ರೂಪಿಸಬೇಕಾದ ತುರ್ತು ಇಂದಿನದು.**

**■ ಗುರುರಾಜ್ ಎಸ್. ದಾವಣಗೆರೆ**

ಅಡುಗೆಮನೆಯ ಗ್ಯಾಸ್ ಲೈಟರ್‌ನಿಂದ ಉಪಗ್ರಹ ಉಡಾವಣೆಯ ತಂತ್ರಜ್ಞಾನದವರೆಗೆ ವಿಜ್ಞಾನ ನಮ್ಮ ಬದುಕಿನ ಬಹುತೇಕ ಸಂಗತಿಗಳಿಗೆ ಕನೆಕ್ಟ್ ಆಗಿವೆ. ಆದರೆ ವಿಜ್ಞಾನದ ಉಪಯೋಗಗಳನ್ನು ಕಣ್ಣು ಮುಚ್ಚಿ ಸ್ವೀಕರಿಸುವ ಸಮಾಜ, ವಿಜ್ಞಾನದ ಮಹತ್ವ, ವಿಕಾಸ ಮತ್ತು ಅನಿವಾರ್ಯತೆಯ ಬಗ್ಗೆ ತಲೆಕೆಡಿಸಿಕೊಳ್ಳುವುದೇ ಇಲ್ಲ. ‘ವಿಜ್ಞಾನ ನಮ್ಮ ಸಂಸ್ಕೃತಿಯ ಭಾಗವಾಗಿಲ್ಲ’ ಎಂಬುದೇ ಆ ನಿರ್ಲಕ್ಷ್ಯಕ್ಕೆ ಮುಖ್ಯ ಕಾರಣ ಎನ್ನುತ್ತಾರೆ ತಜ್ಞರು.

ಏಕೆ ಹೀಗೆ ಎಂದು ಕೇಳಿದಾಗ ವಿಜ್ಞಾನಿ ರಾಜಾರಾಮಣ್ಣ ‘ಅದೇನೂ ರಾಕೆಟ್ ಸೈನ್ಸ್ ಅಲ್ಲ. ಮನೆಗಳಲ್ಲಿ ಉಪಯೋಗಿಸುವ ಇಸ್ತ್ರಿ ಪೆಟ್ಟಿಗೆ, ಟೀವಿ ರಿಮೋಟ್, ಲೈಟ್ ಸ್ವಿಚ್ಚುಗಳು ಹೇಗೆ ಕೆಲಸ ಮಾಡುತ್ತವೆ ಎಂದು ಗೊತ್ತಿರದ ಬೃಹತ್ ಸಂಖ್ಯೆಯ ಜನ ಪ್ರತೀ ದೇಶದಲ್ಲೂ ಇದ್ದಾರೆ. ಅವರಿಗೆಲ್ಲ ಅದು ಗೊತ್ತಾದ ದಿನ ವಿಜ್ಞಾನ–ತಂತ್ರಜ್ಞಾನ ನಿಜವಾಗಿ ಜೀವಿಸುತ್ತದೆ, ಇಲ್ಲದಿದ್ದರೆ ಅದೊಂದು ಜಡ ವಸ್ತುವಾಗುತ್ತದೆ’ ಎಂದಿದ್ದರು. ಇದೇ ಪ್ರಶ್ನೆಗೆ ಉತ್ತರ ನೀಡಿದ್ದ ಐನ್‌ಸ್ಟೈನ್ – ‘ಜ್ಞಾನ ನಿರಂತರವಾಗಿ ವಿಕಾಸಗೊಳ್ಳುತ್ತದೆ. ವಿಜ್ಞಾನ ಅದಕ್ಕೆ ನಿಶ್ಚಿತ ರೂಪಕೊಡುತ್ತದೆ.

ತಂತ್ರಜ್ಞಾನ ಅದನ್ನು ಬಳಸಿಕೊಂಡು ನಮ್ಮ ಬದುಕನ್ನು ಹಸನುಗೊಳಿಸುತ್ತಿದೆ. ಅನುಕೂಲ ಪಡೆದುಕೊಂಡರಷ್ಟೇ ಸಾಲದು. ಅದರ ಸಾರವನ್ನು ಸವಿಯಬೇಕು! ರುಚಿಯಾದ ಖಾದ್ಯವನ್ನು ಸೇವಿಸುವಾಗ ರುಚಿಗೆ ಕಾರಣವಾದ ಅಂಶಗಳನ್ನು ಹೊಗಳುತ್ತ, ವಿಮರ್ಶಿಸುತ್ತ ರುಚಿಯನ್ನು ಆಸ್ವಾದಿಸುತ್ತೇವಲ್ಲವೆ? ರುಚಿಯಾಗಿರದಿದ್ದರೆ ರುಚಿಯಾಗಿಲ್ಲ ಎಂದು ಸಿಟ್ಟು ತೋರಿಸುತ್ತೇವೆ, ಸರಿ ಮಾಡಲು ಹೇಳುತ್ತೇವೆ. ಹಾಗೆಯೇ ವಿಜ್ಞಾನ–ತಂತ್ರಜ್ಞಾನದ ಕೆಲಸಗಳನ್ನು ಜನ ಚರ್ಚಿಸಿ ಆನಂದಿಸಬೇಕು. ಅನನುಕೂಲಗಳಾದಾಗ ಟೀಕಿಸಬೇಕು. ವಿಜ್ಞಾನದ ವಿಷಯಗಳು ರಾಜಕೀಯ, ಆಟ, ಗಾಸಿಪ್‌ಗಳಂತೆ ಚರ್ಚೆಯಾಗಬೇಕು’ ಎಂದಿದ್ದರು.

## ವಿಜ್ಞಾನದ ತತ್ವಜ್ಞಾನ ಮತ್ತು ಕೆಲಸ

ಪ್ರತಿ ಜ್ಞಾನ ಶಾಖೆಗೂ ಇರುವಂತೆ ವಿಜ್ಞಾನಕ್ಕೂ ತತ್ವಜ್ಞಾನವಿದೆ. ಅದು ಅನ್ವೇಷಣೆ ಅಥವಾ ಹುಡುಕಾಟ ಎಂಬ ಕ್ರಿಯಾರೂಪದಲ್ಲಿದೆ. ಅನ್ವೇಷಣೆಗೂ ಹುಡುಕಾಟಕ್ಕೂ ಬಹಳ ವ್ಯತ್ಯಾಸವಿಲ್ಲ. ವಿದ್ಯಮಾನ ಮತ್ತು ಹೇಳಿಕೆಯ ಸತ್ಯಾಸತ್ಯತೆ ಪರೀಕ್ಷಿಸಿ, ನಿಜವಾದರೆ ನಿಜವೆಂದು ನಂಬಿ, ಪ್ರಮಾಣೀಕರಿಸಲು ಹಲವು ಬಾರಿ ಪರೀಕ್ಷಿಸಿ, ಅದನ್ನು ಸಾರ್ವತ್ರಿಕಗೊಳಿಸುತ್ತದೆ. ಆಗ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಾಗುವ ಆವಿಷ್ಕಾರಗಳು ಯಾವುದೇ ದೇಶದ ದೀರ್ಘಕಾಲೀನ ಬೆಳವಣಿಗೆ ಮತ್ತು ಕ್ರಿಯಾಶೀಲತೆಗಳನ್ನು ಉದ್ದೀಪಿಸಿ, ಆ ದೇಶದ ಅಂತಃಸ್ಸತ್ವವನ್ನು ಹೆಚ್ಚಿಸುತ್ತವೆ. ಅನ್ವೇಷಣಾ ಮನೋಭಾವವನ್ನು ಜೀವಂತವಾಗಿಡುತ್ತದೆ.